**ಒ.ಎಸ್. ನಂ. 164/2016** **ಪಿ .ಡಬ್ಲೂ - 2**

ದಿನಾಂಕಃ **27-11-2019** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಡಿ.ಎಂ.ಜಿ ವಕೀಲರಿಂದ,**

1. ನಮ್ಮ ತಂದೆ ಕೇಸು ಹಾಕಿರುವ ವಿಚಾರ ಗೊತ್ತಿದೆ. ನಮ್ಮ ತಂದೆ ಸರ್ವೆ ನಂ.23/2 ರಲ್ಲಿ 23 ಗುಂಟೆ, ಸರ್ವೆ ನಂ.51/4 ರಲ್ಲಿ 29 ಗುಂಟೆ, ಸರ್ವೆ ನಂ.51/5 ರಲ್ಲಿ 17.8 ಗುಂಟೆ, ಸರ್ವೆ ನಂ.51/10 ರಲ್ಲಿ 17.8 ಗುಂಟೆ, ಮುದ್ದಾಪುರ ಸರ್ವೆ ನಂ.74 ರಲ್ಲಿ ಒಂದು ಎಕರೆ 20 ಗುಂಟೆ, ಸರ್ವೆ ನಂ.43/2(ಎ) ರಲ್ಲಿ ಒಂದು ಎಕರೆ 9 ಗುಂಟೆ, ಹಾಗೂ ಸರ್ವೆ ನಂ.43/2 ಬಿ ರಲ್ಲಿ ಒಂದು ಎಕರೆ 11 ಗುಂಟೆಗೆ ಈ ದಾವೆ ಹಾಕಿದ್ದಾರೆ. ಈ ದಾವೆಯಲ್ಲಿ ಮನೆ ಆಸ್ತಿಯನ್ನು ಸಹ ಸೇರಿಸಿದ್ದೇವೆ. ದಾವಾ ಐಟಂ ನಂ.2 ಯಾರಿಂದ ಯಾರಿಗೆ ಕ್ರಯವಾಗಿದೆ ಎಂದರೆ ಗೊತ್ತಿಲ್ಲ. ಅದೇ ರೀತಿ ದಾವಾ ಐಟಂ ನಂ.3 ಯಾರಿಂದ ಯಾರಿಗೆ ಕ್ರಯ ಆಗಿದೆ ಎಂದರೆ

ಗೊತ್ತಿಲ್ಲ. ಚಿಕ್ಕಬಸವಚಾರ್ ಮತ್ತು ಲಿಂಗಾಚಾರ್ ಅಣ್ಣತಮ್ಮಂದಿರು ಎಂದರೆ ಸರಿ. ಲಿಂಗಾಚಾರ್ ಉಃ ಅಪ್ಪಾಜ ಚಾರ್ ಇವರಿಗೆ ಎ. ರಾಜಾಚಾರ್ ಮತ್ತು ವಿನೋದಚಾರ್ ಇಬ್ಬರು ಮಕ್ಕಳು ಎಂದರೆ ಸರಿ. ಲಿಂಗಾಚಾರ್ ಉಃ ಅಪ್ಪಾಜಾಚಾರ್ ಇವರ ತಮ್ಮ ಚಿಕ್ಕಬಸವಚಾರ್ ಆಗಿದ್ದು ಸದರಿ ಚಿಕ್ಕಬಸವಚಾರ್ ಇವರ ಹೆಂಡತಿ ನೀಲಮ್ಮ ಎಂದರೆ ಸರಿ. ಸದರಿ ಚಿಕ್ಕಬಸವಚಾರ್ ಮತ್ತು ನಿಲಮ್ಮಳಿಗೆ ಮಕ್ಕಳಿಲ್ಲ ಎಂದರೆ ಸರಿ. ಸದರಿ ಚಿಕ್ಕಬಸವಚಾರ್ ಮತ್ತು ನಿಲಮ್ಮಳಿಗೆ ಇವರಿಗೆ ಮಕ್ಕಳು ಇರದೇ ಇರುವುದಕ್ಕೆ ಅವರ ಯೋಗಕ್ಷೇಮವನ್ನು 1ನೇ ಪ್ರತಿವಾದಿ ನೋಡಿಕೊಂಡಿದ್ದು ನಂತರ 1ನೇ ಪ್ರತಿವಾದಿಯನ್ನು ಸದರಿ ಇಬ್ಬರೂ ದತ್ತು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಚಿಕ್ಕಬಸವಚಾರ್ ಮತ್ತು ನಿಲಮ್ಮ ತೀರಿಕೊಂಡ ನಂತರ ಅವರ ಉತ್ತರಾಕ್ರಿಯಾಧಿಗಳನ್ನು 1ನೇ ಪ್ರತಿವಾದಿಯರೇ ಮಾಡಿದ್ದಾರೆ ಎಂದರೆ ಸಾಕ್ಷಿಯು ಕುಟುಂಬದವರು ಎಲ್ಲರೂ ಸೇರಿಕೊಂಡು ಮಾಡಿದ್ದೇವೆ ಎನ್ನುತ್ತಾರೆ.

2. ನಮ್ಮ ತಂದೆಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ನಮ್ಮ ದೊಡ್ಡಪ್ಪ ಎ. ರಾಜಾಚಾರ್ ಇವರಿಗೆ ಇಬ್ಬರು ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ನಮ್ಮ ದೊಡ್ಡಪ್ಪನ ಹೆಣ್ಣುಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ತಂಗಿಯಾದ ಹೇಮಾವತಿ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ದಾವಾ ಸ್ವತ್ತುಗಳೆಲ್ಲವೂ 1ನೇ ಪ್ರತಿವಾದಿ ಮತ್ತು ಆತನ ತಂದೆ ಎ. ರಾಜಾಚಾರ್ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ನ್ನು ನಮ್ಮ ಚಿಕ್ಕತಾತ ಚಿಕ್ಕಬಸವಚಾರ್ ಇವರು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಇರಬಹುದು. ದಾವಾ ಸ್ವತ್ತುಗಳೆಲ್ಲವೂ ಚಿಕ್ಕಬಸವಚಾರ್, ಎ. ರಾಜಾಚಾರ್ ಮತ್ತು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿಯು ಸದರಿ ದಾವಾ ಸ್ವತ್ತುಗಳು ಚನ್ನಚಾರ್ ಇವರಿಂದ ಚಿಕ್ಕಬಸವಚಾರ್ ಮತ್ತು ಲಿಂಗಾಚಾರ್ ಇವರಿಗೆ ಬಂದಿವೆ ಎನ್ನುತ್ತಾರೆ. ದಾವಾ ಐಟಂ ನಂ.5ರಲ್ಲಿ ನಮಗೆ ಭಾಗ ಕೊಟ್ಟಿದ್ದು ಭಾಗ ತೆಗೆದುಕೊಂಡ ನಂತರ ಸದರಿ ಜಮೀನಿನಲ್ಲಿ ಉಳುಮೆ ಮಾಡದೇ ನಾವು ಪಾಳು ಬಿಟ್ಟಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತಾರ್ಜಿತ ಸ್ವತ್ತುಗಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು

ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಕೈಬರಹ ಪಹಣಿಗಳಲ್ಲಿ ಪಿತಾರ್ಜಿತ ಸ್ವತ್ತುಗಳು ಎಂದು ಉಲ್ಲೇಖ ಇದೆ ಎನ್ನುತ್ತಾರೆ. ಸಾಕ್ಷಿಗೆ ಈಗ ನಿಪಿ.7 ನ್ನು ತೋರಿಸುತ್ತಿದ್ದು ಕಾಲಂ ನಂ.10 ರಲ್ಲಿ ಕ್ರಯ ಎಂದು ಉಲ್ಲೇಖ ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದೇ ರೀತಿ ಸಾಕ್ಷಿಗೆ ಈಗ ನಿಪಿ.8 ನ್ನು ತೋರಿಸುತ್ತಿದ್ದು ಕಾಲಂ ನಂ.10 ರಲ್ಲಿ ಕ್ರಯ ಎಂದು ಉಲ್ಲೇಖ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಿಕ್ಕಬಸವಚಾರ್ ಮತ್ತು ಅವರ ಹೆಂಡತಿ ನಿಲಮ್ಮ ಇವರ ಯೋಗಕ್ಷೇಮವನ್ನು 1 ನೇ ಪ್ರತಿವಾದಿ ನೋಡಿಕೊಂಡಿದ್ದಕ್ಕೆ ನಮ್ಮ ತಂದೆ, ಕುಟುಂಬಸ್ಥರು ಮತ್ತು ಊರಿನ ಹಿರಿಯರು ಸೇರಿ 1 ನೇ ಪ್ರತಿವಾದಿಯ ಹೆಸರಿಗೆ ಮೃತ್ಯುಪತ್ರವನ್ನು ಸದರಿ ಚಿಕ್ಕಬಸವಚಾರ್ ಮತ್ತು ನಿಲಮ್ಮ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಚಿಕ್ಕಬಸವಚಾರ್ ಮತ್ತು ನಿಲಮ್ಮ ತೀರಿಕೊಂಡ ನಂತರ ದಾವಾ ಸ್ವತ್ತುಗಳ ಖಾತೆ ಮೃತ್ಯುಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ಅಗಿದ್ದಾವೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿರುವ ವಿಚಾರ ನಮಗೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತುಗಳ ಖಾತೆಯಾಗಿ 20 ವರುಷ ಆಗಿದೆ ಎಂದರೆ ಸರಿ. ದಾವಾ ಸ್ವತುಗಳ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ಆದ ನಂತರ ಅದನ್ನು ಪ್ರಶ್ನಿಸಿ ನಾವು 20 ವರುಷಗಳಿಂದ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಿದ್ದು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿರುವ ವಿಚಾರ ನಮಗೆ 2016 ರಲ್ಲಿ ಗೊತ್ತಾಯಿತು ಎನ್ನುತ್ತಾರೆ. ವಾದಿ ನನಗೆ ನಿಪಿ.12 ರಂತೆ ಅಧಿಕಾರ ಪತ್ರ ಕೊಡುವಾಗ ನಾನು ನನ್ನ ಸಹೋದರ ರವೀಂದ್ರ ಮತ್ತು ಸಹೋದರಿ ಹೇಮಾವತಿ ಇವರ ಸಮ್ಮತಿ ಪಡೆದಿದ್ದಾರೆ ಎಂದರೆ ಸಾಕ್ಷಿಯು ಮೌಖಿಕ ಸಮ್ಮತಿ ಪಡೆದಿದ್ದೇನೆ ಎನ್ನುತ್ತಾರೆ. ನಿಪಿ.12 ಕ್ಕೆ ರವೀಂದ್ರ ಮತ್ತು ಹೇಮಾವತಿ ಸಹಿ ಮಾಡಿಲ್ಲ. ನಾವು ಒಟ್ಟು ಕುಟುಂಬದಲ್ಲಿ ವಾಸವಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ.

3. ನಮ್ಮ ತಂದೆ ವಿನೋದಚಾರ್ ಮತ್ತು 1 ನೇ ಪ್ರತಿವಾದಿಯ ತಂದೆ ಎ. ರಾಜಾಚಾರ್ ಎಷ್ಟು ವರುಷದಿಂದ ಬೇರೆ ಬೇರೆಯಾಗಿದ್ದರೆ ಎಂದರೆ ಸಾಕ್ಷಿಯು ಸುಮಾರು 16-20 ವರುಷದ ಹಿಂದೆ ಬೇರೆಯಾಗಿರಬಹುದು ಎನ್ನುತ್ತಾರೆ. ನಮ್ಮ ತಂದೆ ಯಾವ ಊರಿನಲ್ಲಿ ವಾಸವಿದ್ದರು ಎಂದರೆ ಸಾಕ್ಷಿಯು ಅವರು ಸರ್ಕಾರಿ ಸೇವೆಯಲ್ಲಿದ್ದಾಗ ಕಡೂರು,

ಚಿಕ್ಕಮಗಳೂರು, ಚಿತ್ರದುರ್ಗ, ಎನ್.ಆರ್.ಪುರ ಊರುಗಳಲ್ಲಿ ವಾಸವಿದ್ದು ಯಾವಾಗಲಾದರೊಮ್ಮೆ ಸ್ವಂತ ಊರಿಗೆ ಬಂದು ಹೋಗುತ್ತಿದ್ದರು ಎನ್ನುತ್ತಾರೆ. 1 ನೇ ಪ್ರತಿವಾದಿಯ ತಂದೆ ಸ್ವಂತ ಊರಾದ ಅಲಂಬಾಡಿ ಗ್ರಾಮದಲ್ಲಿ ಖಾಯಂ ಆಗಿ ಇದ್ದರು ಎಂದರೆ ಸರಿ. ನಾನು ಸುಮಾರು 15-20 ವರುಷಗಳಿಂದ ಕೆ.ಆರ್. ನಗರದಲ್ಲಿ ವಾಸವಿದ್ದೇನೆ. ಅದೇ ರೀತಿ ನನ್ನ ಸಹೋದರ ರವೀಂದ್ರ ಕೆ.ಆರ್.ನಗರದಲ್ಲಿ ವಾಸವಿದ್ದಾರೆ ಎಂದರೆ ಸರಿ.

4. ದಾವಾ ಐಟಂ ನಂ.4 ರ ಚಕ್ಕುಬಂಧಿ ಹೇಳಲು ಆಗುವುದಿಲ್ಲ. ಅದೇ ರೀತಿ ಇತರೆ ದಾವಾ ಸ್ವತ್ತುಗಳ ಚಕ್ಕುಬಂಧಿ ಸಹ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ನಾವು ಎಷ್ಟು ವರುಷಗಳಿಂದ ಉಳುಮೆ ಮಾಡಿದ್ದೇವೆ ಎಂದರೆ ಸಾಕ್ಷಿಯು ನಾವು ಒಂದು ಕುಟುಂಬದಲ್ಲಿದ್ದಾಗ ಉಳುಮೆ ಮಾಡಿರುತ್ತೇವೆ ಎನ್ನುತ್ತಾರೆ. ನಮ್ಮ ತಂದೆ ಮತ್ತು 1 ನೇ ಪ್ರತಿವಾದಿಯ ತಂದೆ ಈಗಾಗಲೇ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡಿಲ್ಲ ಎನ್ನುತ್ತಾರೆ. ನಮ್ಮ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳನ್ನು ಅವರು ಮಾರಾಟ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯುು ಅವರ ಭಾಗಕ್ಕೆ ಯಾವುದೇ ಸ್ವತ್ತು ಬಂದಿಲ್ಲ ಎನ್ನುತ್ತಾರೆ. ನಮ್ಮ ತಂದೆಯು ದಾವಾ ಸ್ವತ್ತುಗಳಲ್ಲಿ ಯಾವುದೆ ಭಾಗ ಬೇಡ ಎಂದು 1 ನೇ ಪ್ರತಿವಾದಿಯ ತಂದೆ ಕಡೆಯಿಂದ ಹಣ ಪಡದುಕೊಂಡು ಮತ್ತು ಚಿಕ್ಕಬಸವಚಾರ್ ಮತ್ತು ನಿಲಮ್ಮ ಅವರ ಯೋಗಕ್ಷೇಮವನ್ನು 1 ನೇ ಪ್ರತಿವಾದಿ ನೋಡಿಕೊಂಡಿರುವ ಕಾರಣ ಅವರ ಸ್ವತ್ತುಗಳಲ್ಲಿಯೂ ಸಹ ಯಾವುದೇ ಹಕ್ಕನ್ನು ಪಡೆಯದೇ 1 ನೇ ಪ್ರತಿವಾದಿಗೆ ಮೃತ್ಯುಪತ್ರ ಬರೆಸಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ನಮ್ಮ ತಂದೆಗೆ ಗೊತ್ತಿದ್ದ ಕಾರಣ ಅವರು ದಾವಾ ಸ್ವತ್ತುಗಳಿಗೆ ಯಾವುದೇ ಕೇಸು ಹಾಕದೇ ಇದ್ದು ಇತ್ತೀಚೆಗೆ ನಮ್ಮ ಒತ್ತಾಯದ ಮೇರೆಗೆ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ನನಗೂ ಕೂಡ ಈ ಎಲ್ಲಾ ವಿಚಾರ ಗೊತ್ತಿದ್ದು ಬೇರೆಯವ ಚಿತಾವಣೆ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಕೇ ಸ ಅದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**